# ಛದ್ಮವೇಷಧಾರಿ ಜೇಡ!



'ಹಕ್ಕಿ ಹಿಕ್ಕೆ ಏಡಿ ಜೇಡ' ಪ್ರಕೃತಿಯಲ್ಲಿ ಛದ್ಮ ವೇಷಧಾರಿ ಜೀವಿಗಳಲ್ಲೊಂದು. ಹಕ್ಕಿಯ ಹಿಕ್ಕೆಯನ್ನು ಹೋಲುವ ಈ ಜೇಡದ ಊದು ನೊಣದ ಭಕ್ಷಣೆಯ ಪ್ರಸಂಗ.

■ ಶಶಿಧರಸ್ವಾಮಿ ಆರ್. ಹಿರೇಮಠ







ಎಕ್ಕದ ಗಿಡದ ಎಲೆಯ ಮೇಲೆ ಹಕ್ಕಿಯ ಹಿಕ್ಕೆ ಮಿಸುಗಾಡಿದಂತೆ ಭಾಸವಾಯಿತು! ಹಕ್ಕಿ ಹಿಕ್ಕೆ ಏಕೆ ಮಿಸುಗಾಡಬೇಕು?

ಗಿಡದ ಸನಿಹಕ್ಕೆ ಹೋಗಿ ನೋಡಿದಾಗ ಆಶ್ಚರ್ಯ ಕಾದಿತ್ತು ಅದುವೇ ಹಕ್ಕಿ ಹಿಕ್ಕೆ ಏಡಿ ಜೇಡ! ಈ ಜೇಡವು ಕಾಣಸಿಗುವುದು ಬಲು ಅಪರೂಪ. ತಕ್ಷಣವೇ ಮನೆಗೆ ಬಂದು ಕ್ಯಾಮೆರಾ ತೆಗೆದುಕೊಂಡು ಆ ಗಿಡದ ಹತ್ತಿರಕ್ಕೆ ಹೋದೆ. ಅಲ್ಲಿ ಮತ್ತೂ ಒಂದು ಅಚ್ಚರಿಯಿತ್ತು. ಆ ಜೇಡವು ಊದು ನೊಣವನ್ನು ಬೇಟೆಯಾಡಿ, ಅದನ್ನು ಸವಿಯುವುದರಲ್ಲಿ ಮಗ್ನವಾಗಿತ್ತು. ತಕ್ಷಣವೇ ನಾನು ಜೇಡ ತನ್ನ ಬೇಟೆಯನ್ನು ಸವಿಯುವ ಭಂಗಿಗಳನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯತೊಡಗಿದೆ.

ಬೇಟೆಯಾಡಿದ ಊದು ನೊಣದ ಹೊಟ್ಟೆಯ ಭಾಗವನ್ನು ಮೊದಲು ಸವಿಯಿತ್ತಾ, ನಂತರ ಬೇಟೆಯನ್ನು ತಿರುಗಿಸಿ ಎತ್ತಿ ಹಿಡಿದು ಹೀರಿ, ತದನಂತರ ಶಿರದ ಭಾಗವನ್ನು ಹಿಡಿದು ಬೆಳಗಿನ ಆಹಾರವನ್ನು ಸವಿಯುವುದರಲ್ಲಿ ಮಗ್ನವಾಗಿತ್ತು. ಆ ಎಲ್ಲ ಕ್ಷಣಗಳು ನನ್ನ ಕ್ಯಾಮೆರಾದಲ್ಲಿ ದಾಖಲಾದವು.

'ಹಕ್ಕಿ ಹಿಕ್ಕೆ ಏಡಿ ಜೇಡ' ಅಥವಾ 'ಹಕ್ಕಿ ಹಿಕ್ಕೆ ಜೇಡ'ಗಳನ್ನು ಇಂಗ್ಲಿಷಿನಲ್ಲಿ 'ಬರ್ಡ್ ಡ್ರಾಪಿಂಗ್ ಕ್ರ್ಯಾಬ್ ಸ್ಪೈಡರ್' (Bird Dropping Crab Spider) ಅಥವಾ 'ಬರ್ಡ್ ಡಂಗ್ ಕ್ರ್ಯಾಬ್ ಸ್ಪೈಡರ್' (Bird Dung Crab Spider) ಎಂದು ಕರೆಯಲಾಗುತ್ತದೆ. ವೈಜ್ಞಾನಿಕವಾಗಿ ಫೈನಾರಾಕ್ನೆ (Phrynarachne sp) ಕುಲಕ್ಕೆ ಸೇರಿದೆ. ಈ ಜೇಡಗಳನ್ನು ಸಂಧಿಪದಿ (Arthropoda) ಗಳ, 'ಅರಾಕ್ನಿಡಾ' (Arachnida) ವರ್ಗದ, 'ಅರೆನೀ' (Araneae) ಗಣದ, 'ಥೋಮಿಸಿಡೇ' (Thomisidae) ಕುಟುಂಬಕ್ಕೆ ಸೇರಿಸಲಾಗಿದೆ.

ಈ ಜೇಡಗಳ ಬೇಟೆಯಾಡುವ ರೀತಿಯೇ ಬಲುವಿಚಿತ್ರವಾಗಿದೆ. ಇವು ಬಲೆಯನ್ನು ನೇಯುವುದಿಲ್ಲ. ಬದಲಿಗೆ ಬೇಟೆಯನ್ನು ತನ್ನತ್ತ ಆಕರ್ಷಿಸಲು ಮತ್ತು ಪರಭಕ್ಷಕಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಸಹಾಯ ಮಾಡುವ ಕೊಳಕು (ಮಲದ) ವಾಸನೆಯನ್ನು ಪಸರಿಸುತ್ತವೆ. ಈ ಜೇಡವು ತನ್ನ ವೈರಿಗಳಾದ ಪರಭಕ್ಷಕರು ಕಂಡಾಗ ಮಾತ್ರ ತನ್ನ ಕಾಲುಗಳನ್ನು ಒಳಗೆಳೆದುಕೊಂಡು ಸುರುಳಿಯಾಕಾರಕ್ಕೆ ಬರುತ್ತದೆ. ಆ ಆಕಾರ ಪಕ್ಷಿಗಳ ಹಿಕ್ಕೆಯನ್ನು ಹೋಲುತ್ತದೆ. ಬೇಟೆಯನ್ನು ಆಕರ್ಷಿಸಲು ಮತ್ತು ವೈರಿ ಪರಭಕ್ಷಕಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಪಕ್ಷಿಗಳ ಮಲದ ವಾಸನೆ ಮತ್ತು ವಿಶಿಷ್ಟ ವೇಷದ ಅನುಕರಣೆಯ ಸಾಮರ್ಥ್ಯಕ್ಕೆ ಇವು ಹೆಸರುವಾಸಿ.

ಈ ಏಡಿ ಜೇಡದ ಹೊಟ್ಟೆ ತ್ರಿಕೋಣಾಕೃತಿಯಲ್ಲಿದ್ದು, ಶಿರೋವಕ್ಷಕ್ಕಿಂತ ದೊಡ್ಡದು. ಉದರವು ಹೊಳೆಯುವ ಕಂದು ಬಣ್ಣದ್ದಾಗಿದೆ. ಇದಕ್ಕೆ ಎಂಟು ಕಣ್ಣುಗಳಿವೆ. ನಾಲ್ಕು ಜೊತೆ ಕಾಲುಗಳಿದ್ದು, ಆ ಕಾಲುಗಳು ವಿಶಿಷ್ಟವಾದ ಮಾದರಿಯನ್ನು ಹೊಂದಿ ಏಡಿಗಳಂತೆ ಕಾಣುವ ಹಾಗೆ ಮಾಡಿವೆ. ಎರಡು ಜೊತೆ ಕಾಲುಗಳು ಬಿಳುಪಾಗಿವೆ, ಉದ್ದವಾಗಿವೆ, ತುದಿಯಲ್ಲಿ ಕಪ್ಪಾಗಿವೆ. ಇನ್ನೆರಡು ಕಾಲುಗಳು ಮಾಸಲು ಬಣ್ಣದವು ಹಾಗೂ ಚಿಕ್ಕವಾಗಿವೆ. ಉಬ್ಬುತಗ್ಗುಗಳಿರುವ ಕಂದು ಬೆನ್ನು ಈ ಜೇಡಗಳದು. ಹೆಣ್ಣಿನ ಹೊಟ್ಟೆಯ ಅಗಲವು ಸರಿಸುಮಾರು 9.3 ಮಿ.ಮೀ. ಮತ್ತು ದೇಹದ ಉದ್ದವು ಸರಿಸುಮಾರು 14.5 ಮಿ.ಮೀ.ನಷ್ಟು ಇರುತ್ತದೆ.

ಈ ಮೊದಲು ಶಿರಸಿಯ ಕಾಡಿನಲ್ಲಿ ಈ ಜೇಡವನ್ನು ಕಂಡಿದ್ದೆ. ಆಗ ಎಲೆಯ ಮೇಲೆ ಹಕ್ಕಿ ಹಾಕಿದ ಹಿಕ್ಕೆ ಎಂದು ಮುಂದೆ ಸಾಗಿ, ನಂತರ ಏನೋ ಸಂಶಯ ಬಂದು ತಿರುಗಿ ಬಂದು ನೋಡಿದಾಗಲೇ ಗೊತ್ತಾಗಿದ್ದು – ಅದು ಜೇಡವೆಂಬುದು. ಹೌದು, ಈ ಏಡಿ ಜೇಡಗಳು ಪ್ರಕೃತಿಯಲ್ಲಿ ಛದ್ಮವೇಷಧರಿಸಿ ಕಪಟರೂಪಿಗಳಾಗಿರುತ್ತವೆ. ಕಂಡರೂ ಗುರುತಿಸುವುದು ಕಷ್ಟ.

ಪ್ರಸ್ತುತ ನಾನು ನೋಡಿದ ಜೇಡ ಬೆಳಗಿನ ಆಹಾರ ಸೇವಿಸುವುದರಲ್ಲಿ ಮಗ್ನವಾಗಿತ್ತು. ನಾನು ಅದರ ಆಹಾರಾರ್ಜನೆಗೆ ಭಂಗ ಮಾಡಬಾರದೆಂದು ಮನೆಗೆ ಮರಳಿ ಬಂದೆ. ಸುಮಾರು ಒಂದು ತಿಂಗಳವರೆಗೆ ಅದೇ ಗಿಡದ ಎಲೆಯ ಮೇಲೆ ಆ ಜೇಡ ಕಾಣಿಸಿಕೊಳ್ಳುತ್ತಿತ್ತು. ಅದು ಅಲ್ಲಿಂದ ಜಾಗ ಖಾಲಿ ಮಾಡಿದ ಮೇಲೆ, ಜೇಡವಿಲ್ಲದ ಹಚ್ಚ ಹಸಿರಿನ ಎಲೆಗಳಿಂದ ಕಂಗೊಳಿಸುತ್ತಿದ್ದ ಗಿಡವು ಏಕೋ ಖಾಲಿ ಖಾಲಿಯಾಗಿ ಕಾಣಿಸಿತು. ನನ್ನ ಚಿತ್ತ ಆ ಜೇಡನ ಸುತ್ತ ಬಲೆ ನೇಯತೊಡಗಿತು.

ಪ್ರತಿಕ್ರಿಯಿಸಿ: feedback@sudha.co.in